**ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಜೇವರ್ಗಿ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 486/2016 |

ದಿನಾಂಕ 26.11.2025 ರಂದು ಸಾಕ್ಷಿಗೆ ಕರೆಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 22 ಪ್ರಾಸಾಃ 9

| | |
|---|---|
| ಹೆಸರು | ಸಂಗಪ್ಪ |
| ತಂದೆಯ ಹೆಸರು | ಸಿದ್ದಪ್ಪ ಹುಲ್ಲೂರ |
| ವಯಸ್ಸು | 64 ವರ್ಷಗಳು |
| ಉದ್ಯೋಗ | ನಿವೃತ ಡಿ ವೈ ಎಸ್ ಪಿ |
| ವಾಸಸ್ಥಳ | ವಿಜಯಪೂರ |

**ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ**

ಡಿಸೆಂಬರ್-2014 ರಿಂದ ಪೆಬ್ರುವರಿ-2016 ರವರೆಗೆ ಸಿಪಿಐ ಆಗಿ ಜೇವರ್ಗಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17.01.2016 ರಂದು ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪಡೆದು ಅದೇ ದಿನ ಚಾಸಾ-12 ರಿಂದ 14 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-19 ರವರು ಟ್ರ್ಯಾಕ್ಟರ ನಂ.ಕೆಎ-32/ಟಿಎ-3693 ಮತ್ತು ಎರಡು ಟ್ರಾಲಿ ನಂ.ಕೆಎ-32/ಟಿಎ-6128 ಮತ್ತು ಕೆಎ-32/ಟಿಎ-6142 ಗಳನ್ನು ಯಡ್ರಾಮಿ ಠಾಣೆಯಲ್ಲಿ ಹಾಜರುಪಡಿಸಿರುತ್ತಾರೆ. ಚಾಸಾ-19 ರವರು ನೀಡಿದ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುಸಲಾಯಿತು. ಸದರಿ ಟ್ರ್ಯಾಕ್ಟರ ಮತ್ತು ಟ್ರಾಲಿಗಳನ್ನು ಚಾಸಾ-6 ಮತ್ತು 7 ರವರ ಸಮಕ್ಷಮ ಮುಂಜಾನೆ 11.30 ರಿಂದ 12.30 ಗಂಟೆವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುಸಲಾಯಿತು. ಸಾಕ್ಷಿ ನಿಪಿ-6 ರಿಂದ 11 ರಲ್ಲಿ ಕಾಣುವ ಅಪಘಾತಪಡಿಸಿದ ಟ್ರ್ಯಾಕ್ಟರ ಮತ್ತು ಟ್ರಾಲಿಗಳ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ 26.01.2016 ರಂದು ಆರೋಪಿತನು ಖುದ್ದಾಗಿ ಠಾಣೆಗೆ ಹಾಜರಾಗಿದ್ದರಿಂದ ಆತನ ಸ್ವ ಖುಷಿ ಹೇಳಿಕೆ ಪಡೆದಿರುತ್ತೇನೆ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿ ಸ್ವ ಖುಷಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಸಾಕ್ಷಿ

ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಆರೋಪಿತನ ಗುರುತಿಸುವಿಕೆ ಕುರಿತು ಚಾಸಾ-1, 7 ರಿಂದ 11 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೆ ದಿನ ಟ್ರ್ಯಾಕ್ಟರ ಮಾಲಿಕ ಚಾಸಾ-15 ಮತ್ತು ಟ್ರಾಲಿಗಳ ಮಾಲಿಕರ ಚಾಸಾ-16 ರವರ ಇಂಡಿಮನಿಟಿ ಬ್ಯಾಂಡ ಪಡೆದು ಆರೋಪಿತನೆ ಅಪಘಾತವಾದ ದಿನದಂದು ಚಾಲಕನಿದ್ದ ಎಂದು ಹೇಳಿಕೆಯನ್ನು ಪಡೆದುಕೊಂಡು ಅವರ ವಶಕ್ಕೆ ವಾಹನಗಳನ್ನು ಬಿಡುಗಡೆಗೊಳ್ಳಿಸಿರುತ್ತೇನೆ. ಸದರಿ ಹೇಳಿಕೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-14 ಎಂದು ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು ಮತ್ತು ನಿಪಿ-15 ಎಂದು ಸಾಕ್ಷಿ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಈಗ ನಾನು ಸದರಿ ಇಂಡಿಮಿನಿಟಿ ಬ್ಯಾಂಡಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-16 ಎಂದು ಸಾಕ್ಷಿ ಸಹಿಯನ್ನು ನಿಪಿ-16(ಎ) ಮತ್ತು ನಿಪಿ-17 ಎಂದು ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ದಿನಾಂಕ 30.01.2016 ರಂದು ಆರ್ ಟಿ ಒ ರವರಿಂದ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅದೆ ದಿನ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-23 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಚಾಸಾ-1 ರವರು ಪುನರ ಹೇಳಿಕೆ ನೀಡಲು ಠಾಣೆಗೆ ಎಷ್ಟು ಗಂಟೆಗೆ ಬಂದರು ಎಂದರೆ ಸಾಕ್ಷಿ ಈ ಪ್ರಕರಣ ಸುಮಾರು 10 ವರ್ಷಗಳಾಗಿರುವುರಿಂದ ಸಮಯ ನನಗೆ ನೆನಪಿಲ್ಲ. ದಿನಾಂಕ 20.01.2016 ರಂದು ಎಷ್ಟು ಜನರು ಹೇಳಿಕೆ ಪಡೆದಿದ್ದೀರಾ ಎಂದರೆ ಸಾಕ್ಷಿ 05-ಜನರ ಪುನರ ಹೇಳಿಕೆ ಇಬ್ಬರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ-1, 7 ರಿಂದ 11 ರವರನ್ನು ಚಾಸಾ-21 ರವರ ಮುಖಾಂತರ ಹೇಳಿಕೆ ಪಡೆದುಕೊಳ್ಳಲು ಕರೆಸಿರುತ್ತೇನೆ. ಘಟನೆಯಾದ 05 ದಿನಗಳ ನಂತರ ಸಾಕ್ಷಿದಾರರ ಹೇಳಿಕೆ ಪಡೆಯಲು ಏಕೆ ವಿಳಂಬವಾಗಿರುತ್ತದೆ ಎಂದರೆ ಸಾಕ್ಷಿ ಆರೋಪಿ ಸಿಗದ ಕಾರಣ ವಿಳಂಬವಾಗಿರುತ್ತದೆ ಎಂದು ಹೇಳುತ್ತಾರೆ. ಚಾಸಾ-15 ಮತ್ತು 16 ರವರು ದಿನಾಂಕ 20.01.2016 ರಂದು ಠಾಣೆಗೆ ಬಂದಿರುತ್ತಾರೆ. ಆರೋಪಿಯ ಸ್ವ ಖುಷಿ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಟ್ರ್ಯಾಕ್ಟರ ಮತ್ತು ಟ್ರಾಲಿಗಳು ಖಾಲಿ ಇದ್ದವು. ಅಪಘಾತಪಡಿಸಿದ ಟ್ರ್ಯಾಕ್ಟರನ ಭಾವಚಿತ್ರಗಳಲ್ಲಿ ರಕ್ತ ಕಲೆಗಳು ಹತ್ತಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಕ್ಟರ ಚಕ್ರಗಳಿಂದ ಮೃತನ ರಕ್ತದ ಮಾದರಿ ತೆಗೆದು ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೀರಾ ಎಂದರೆ ಸಾಕ್ಷಿ ಅಪಘಾತವಾದ 03-ದಿನಗಳ ನಂತರ ಟ್ರ್ಯಾಕ್ಟರ ಸಿಕ್ಕಿರುತ್ತದೆ ಎಂದು ಹೇಳುತ್ತಾರೆ.

ನಾನು ಚಾ.ಸಾ.21 ರವರಿಂದ ಕಡತ ಪಡೆದುಕೊಂಡ ನಂತರ ಪರೀಶೀಲನೆ ಮಾಡದೆ ತನಿಖೆ ಕೈಗೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳು ಇಲ್ಲದೇ ಇದ್ದರು ಸಹ ಪ್ರಕರಣಕ್ಕೆ

ಬೇಕಾದ ರೀತಿಯಲ್ಲಿ ಠಾಣೆಯಲ್ಲೆ ಕುಳಿತು ಹೇಳಿಕೆಗಳನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತಪಡಿಸಿದ ವಾಹನವನ್ನು ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಅಪಘಾತಪಡಿಸಿರುವುದಾಗಿ ಒಪ್ಪಿಕೊಂಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ ಮತ್ತು ಟ್ರಾಲಿಗಳ ಮಾಲಿಕರು ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಆರೋಪ ಸಾಬೀತಾಗದೆ ಇದ್ದರು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇರುತ್ತದೆ

ಜೆ.ಎಮ್.ಎಫ್.ಸಿ.
ಜೇವರ್ಗಿ